KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **6**

ದೋ.ಸಾ. ಃ **9**

ದಿ.**27.02.2025**

| | |
|---|---|
| ಹೆಸರು | ಃ ದೇವರಾಜು |
| ತಂದೆಯ ಹೆಸರು | ಃ ರಾಜು |
| ವಯಸ್ಸು | ಃ **40** ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸಸ್ಥಳ | ಃ ಹೆಬ್ಬೂರು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

**1.** ನಾನು ಹೆಬ್ಬೂರಿನ ಬನ್ನಿಮರದ ಕಟ್ಟೆ ಬಳಿ ದಿನಸಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ. ನನ್ನ ಅಂಗಡಿಯ ಪಕ್ಕದಲ್ಲಿ ನಾಗರಾಜಾಚಾರ್ ರವರು ಕಾರ್ಪೆಂಟರ್ ಕೆಲಸ ಮಾಡುವ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ಆ ಅಂಗಡಿಯಲ್ಲಿ ಈಗ ವಿಸಿಯಲ್ಲಿ ಕಂಡುಬರುವ ಆರೋಪಿ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದನು. ಆತನ ಹೆಸರು ಈಗ ನೆನಪಿಲ್ಲ. ಶಿವಸ್ವಾಮಿ ಮತ್ತು ಗಿರೀಶ್ ನಾಗರಾಜಾಚಾರ್ ರವರ ಬಳಿ ಕೆಲಸ ಮಾಡುತ್ತಿದ್ದರು. ಅವರು ಅಂಗಡಿಯಲ್ಲಿ ಕೆಲಸ ಮಾಡಿ ಕೆಲವೊಮ್ಮೆ ಅಂಗಡಿಯಲ್ಲೇ ರಾತ್ರಿ ಮಲಗುತ್ತಿದ್ದರು. ನಾಗರಾಜಾಚಾರ್ ರವರ ಅಂಗಡಿ ಕೀಯನ್ನು ನನ್ನ ಹತ್ತಿರ ಕೆಲವೊಮ್ಮೆ ಕೊಡುತ್ತಿರಲಿಲ್ಲ. ದಿ.19.03.2023 ರಂದು ನಾಗರಾಜಾಚಾರ್ ರವರ ಅಂಗಡಿ ಕೀಯನ್ನು ಎಲ್ಲಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ನಾಗರಾಜಾಚಾರ್ ರವರ ತಾಂಡೇಶ್ವರ ವುಡ್ ವರ್ಕ್ ಅಂಗಡಿಯ ಕೀಯನ್ನು ಆರೋಪಿಗೆ ಕೊಟ್ಟಿಲ್ಲ. ನಾಗರಾಜಾಚಾರ್ ರವರ

ತಾಂಡೇಶ್ವರ ವುಡ್ ವರ್ಕ್ ಅಂಗಡಿಯ ಬಳಿ ಹೊಡೆದಾಟವಾಗಿ ಒಬ್ಬನಿಗೆ ಗಾಯವಾಗಿ ಮೃತಪಟ್ಟಿದ್ದಾನೆಂದು ಮರುದಿನ ಗೊತ್ತಾಯಿತು. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**2.** ನಾಗರಾಜಾಚಾರ್ ರವರು ಕೆಲವೊಮ್ಮೆ ಅವರ ತಾಂಡೇಶ್ವರ ವುಡ್ ವರ್ಕ್ ಅಂಗಡಿಯ ಕೀಯನ್ನು ಹಾಕಿ ನಮ್ಮ ಅಂಗಡಿಗೆ ಕೊಟ್ಟು ಹೋಗುತ್ತಿದ್ದರು ಎಂದರೆ ಸರಿಯಲ್ಲ. ದಿ.19.03.2023 ರಂದು ಮಧ್ಯಾಹ್ನ 3.00 ಗಂಟೆಯಲ್ಲಿ ತಾಂಡೇಶ್ವರ ವುಡ್ ವರ್ಕ್ ಅಂಗಡಿಯ ಕೀಯನ್ನು ನಮ್ಮ ಅಂಗಡಿಯಲ್ಲಿ ಕೊಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ರಾತ್ರಿ 9.15 ಗಂಟೆಗೆ ವಿಸಿಯಲ್ಲಿ ಕಾಣುವ ಅರುಣ ಬಂದು ತಾಂಡೇಶ್ವರ ವುಡ್ ವರ್ಕ್ ಅಂಗಡಿಯ ಕೀಯನ್ನು ಕೇಳಿದನು ಎಂದರೆ ಸರಿಯಲ್ಲ. ನಾನು ಆತನಿಗೆ ಕೀಯನ್ನು ಕೊಟ್ಟು ನನ್ನ ಅಂಗಡಿಯ ಬಾಗಿಲನ್ನು ಹಾಕಿಕೊಂಡು ಮನೆಗೆ ಹೋದೆನು ಎಂದರೆ ಸರಿಯಲ್ಲ. ಮರುದಿನ ಬೆಳಿಗ್ಗೆ 10.00 ಗಂಟೆಗೆ ನಾನು ಅಂಗಡಿಗೆ ಬಂದಾಗ ನಾಗರಾಜಾಚಾರ್ ರವರ ಅಂಗಡಿಯಲ್ಲಿ ಕೆಲಸ ಮಾಡುವ ವಿಸಿಯಲ್ಲಿ ಕಾಣುವ ಆರೋಪಿ ಅರುಣ ಶಿವಸ್ವಾಮಿ ಮತ್ತು ಗಿರೀಶ್ ರವರ ಜೊತೆಗೆ ಜಗಳ ಮಾಡಿ ರೀಪರ್ ನಿಂದ ಅವರಿಗೆ ಹೊಡೆದು, ಗಿರೀಶ್ ಸತ್ತುಹೋಗಿರುವ ವಿಚಾರ ಗೊತ್ತಾಯಿತು ಎಂದರೆ ನಿಜ. ಈ ವಿಚಾರವನ್ನು ನಾನು ನಾಗರಾಜಾಚಾರ್ ರವರ ಹತ್ತಿರ ಕೇಳಿ ತಿಳಿದುಕೊಂಡೆನು ಎಂದರೆ ನಿಜ. ನಾಗರಾಜಾಚಾರ್ ರವರು ನನಗೆ ಕೀ ಕೊಟ್ಟಿದ್ದರು, ಆ ಕೀಯನ್ನು ಆರೋಪಿಗೆ ಕೊಟ್ಟಿದ್ದರೂ ಈಗ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು

ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯ ಭಾಗವನ್ನು ನಿಶಾನೆ ಪಿ25 ಎಂದು ಗುರುತಿಸಲಾಯಿತು. ನಿಶಾನೆ ಪಿ25 ರಂತೆ ಹೇಳಿಕೆ ಕೊಟ್ಟಿದ್ದರೂ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**3.** ಗಿರೀಶ ಹೇಗೆ ಸತ್ತನು ಎಂದು ನನಗೆ ಗೊತ್ತಿಲ್ಲ. ಗಿರೀಶ ಯಾರಿಂದ ಸತ್ತನು ಎಂದು ನನಗೆ ಗೊತ್ತಿಲ್ಲ. ನಾಗರಾಜಾಚಾರ್ ರವರು ಹೇಳಿದ್ದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಿಜ.

ಮರು ವಿಚಾರಣೆ : ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು